**ಕರ್ನಾಟಕ ವಿಧಾನಸಭೆ**

**ಹದಿನಾಲ್ಕನೇ ವಿಧಾನಸಭೆ**

**ಹನ್ನೆರಡನೇ ಅಧಿವೇಶನ**

# ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ಅರಣ್ಯ ಅಧಿಕಾರಿಗಳು ಮತ್ತು ಇತರ ಸಿಬ್ಬಂದಿಯ ವರ್ಗಾವಣೆ ಹಾಗೂ ಸ್ಥಳನಿಯುಕ್ತಿಗಳ ನಿಯಂತ್ರಣ) ವಿಧೇಯಕ, 2016

**(2016ರ ವಿಧಾನಸಭೆಯ ವಿಧೇಯಕ ಸಂಖ್ಯೆ-34)**

ಅಪಾಯ ಸಂಭವವಿರುವ (critical) ಮತ್ತು ಇತರ ಪ್ರದೇಶಗಳಲ್ಲಿನ ಅರಣ್ಯ ಇಲಾಖೆಯ ಅರಣ್ಯ ಅಧಿಕಾರಿಗಳು ಮತ್ತು ಇತರ ಸಿಬ್ಬಂದಿಗಳ ವರ್ಗಾವಣೆ ಹಾಗೂ ಸ್ಥಳನಿಯುಕ್ತಿಯ ನಿಯಂತ್ರಣಕ್ಕಾಗಿ ಉಪಬಂಧವನ್ನು ಕಲ್ಪಿಸಲು ಒಂದು ವಿಧೇಯಕ.

ಅಪಾಯ ಸಂಭವವಿರುವ (critical) ಮತ್ತು ಇತರ ಪ್ರದೇಶಗಳಲ್ಲಿನ ಅರಣ್ಯ ಇಲಾಖೆಯ ಅರಣ್ಯ ಅಧಿಕಾರಿಗಳು ಮತ್ತು ಇತರ ಸಿಬ್ಬಂದಿಗಳ ವರ್ಗಾವಣೆಯ ನಿಯಂತ್ರಣಕ್ಕಾಗಿ ಮತ್ತು ಅದಕ್ಕೆ ಸಂಬಂಧಿಸಿದ ಅಥವಾ ಆನುಷಂಗಿಕವಾದ ವಿಷಯಗಳಿಗೆ ಉಪಬಂಧವನ್ನು ಕಲ್ಪಿಸುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಅರವತ್ತೇಳನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ, ಎಂದರೆ:-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.**- (1) ಈ ಅಧಿನಿಯಮವನ್ನು ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ಅರಣ್ಯ ಅಧಿಕಾರಿಗಳು ಮತ್ತು ಇತರ ಸಿಬ್ಬಂದಿಯ ವರ್ಗಾವಣೆ ಹಾಗೂ ಸ್ಥಳನಿಯುಕ್ತಿಗಳ ನಿಯಂತ್ರಣ) ಅಧಿನಿಯಮ, 2016 ಎಂದು ಕರೆಯತಕ್ಕದ್ದು.

(2) ಇದು, ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದ ಅಂಥ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

**2. ಪರಿಭಾಷೆಗಳು.**- ಈ ಅಧಿನಿಯಮದಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,-

(1) "ನೇಮಕಾತಿ" ಎಂದರೆ, ಅರಣ್ಯ ಅಧಿಕಾರಿಗಳು ಅಥವಾ ಇತರ ಸಿಬ್ಬಂದಿಗಳ ಸ್ಥಾನಪನ್ನದ ಆಧಾರದ ಮೇಲೆ ನೇರ ನೇಮಕಾತಿಯ ಅಥವಾ ಬಡ್ತಿಯ ಮೂಲಕ ಮಾಡಿದ ನೇಮಕಾತಿ;

(2) "ನೇಮಕಾತಿ ಪ್ರಾಧಿಕಾರ" ಎಂದರೆ, ಸಂಬಂಧಿಸಿದ ವೃಂದಗಳಿಗೆ ನೇಮಕಾತಿ ಮಾಡುವುದಕ್ಕೆ ಸಕ್ಷಮವಾದ ಪ್ರಾಧಿಕಾರ;

(3) "ಹುದ್ದೆಯ ಪ್ರವರ್ಗ" ಎಂದರೆ, ಈ ಕೆಳಗಿನಂತೆ ನಿರ್ದಿಷ್ಟಪಡಿಸಿದ ಹುದ್ದೆಗಳ ವರ್ಗ, ಎಂದರೆ:-

**ಅನುಸೂಚಿ-I ರಲ್ಲಿ ನಿರ್ದಿಷ್ಟಪಡಿಸಿದ ಹುದ್ದೆಗಳ ಪ್ರವರ್ಗೀಕರಣ-ಅಧಿಕಾರಿಗಳು ಮತ್ತು ಸಿಬ್ಬಂದಿಗಳು**

| | | |
|---|---|---|
| ಪ್ರವರ್ಗ "ಎ" | ಪ್ರಾಸಂಗಿಕ (collateral) ಹುದ್ದೆಗಳು | ಅರಣ್ಯ ಇಲಾಖೆಯ ವೃಂದದ ಆಧಾರದ ಮೇಲೆ ನಿರ್ದಿಷ್ಟಪಡಿಸಿದ ಬಿ ಮತ್ತು ಸಿ ಪ್ರವರ್ಗಕ್ಕೆ ಹೊರತಾದ ಹುದ್ದೆಗಳು |
| ಪ್ರವರ್ಗ "ಬಿ" | ವನ್ಯಜೀವಿ ಹುದ್ದೆಗಳು ಮತ್ತು ಅಂತರರಾಜ್ಯ ಗಡಿ (ಪ್ರಾದೇಶಿಕ) ಹುದ್ದೆಗಳು | ವನ್ಯಜೀವಿ ವಿಭಾಗ ಮತ್ತು ಅಂತರರಾಜ್ಯ ಗಡಿ (ಪ್ರಾದೇಶಿಕ) ಹುದ್ದೆಗಳು |
| ಪ್ರವರ್ಗ "ಸಿ" | ಪ್ರಾದೇಶಿಕ ಹುದ್ದೆಗಳು | ಕರ್ನಾಟಕ ಅರಣ್ಯ ಅಧಿನಿಯಮ, 1964 ಮತ್ತು ಅದರಡಿಯಲ್ಲಿ ರಚಿಸಲಾದ ನಿಯಮಗಳ ಅಡಿಯಲ್ಲಿ ಶಾಸನಬದ್ಧ ಅಧಿಕಾರಗಳನ್ನು ಹೊಂದಿರುವ ಹುದ್ದೆಗಳು. |

**ಅನುಸೂಚಿ-II ರಲ್ಲಿ ನಿರ್ದಿಷ್ಟಪಡಿಸಿದ ಹುದ್ದೆಗಳ ಪ್ರವರ್ಗೀಕರಣ-ಇತರ ಸಿಬ್ಬಂದಿಗಳು**

| | |
|---|---|
| ಪ್ರವರ್ಗ "ಎ" | ಪ್ರವರ್ಗ "ಬಿ" ಮತ್ತು "ಸಿ" ಸ್ಥಳಗಳಲ್ಲಿ ನಿರ್ದಿಷ್ಟಪಡಿಸಿದ ಹುದ್ದೆಗಳನ್ನು ಹೊರತುಪಡಿಸಿದ ಹುದ್ದೆಗಳು. |
| ಪ್ರವರ್ಗ "ಬಿ" | ತಾಲ್ಲೂಕು ಕೇಂದ್ರಸ್ಥಾನಗಳಲ್ಲಿರುವ ಹುದ್ದೆಗಳು. |
| ಪ್ರವರ್ಗ "ಸಿ" | ಜಿಲ್ಲೆ, ವಿಭಾಗ, ವೃತ್ತ ಅಥವಾ ರಾಜ್ಯದ ಕೇಂದ್ರಸ್ಥಾನಗಳಲ್ಲಿರುವ ಹುದ್ದೆಗಳು. |

(4) "ಪ್ರಾಸಂಗಿಕ ಹುದ್ದೆಗಳು" ಎಂದರೆ, ವನ್ಯಜೀವಿ, ಅಂತರರಾಜ್ಯ ಗಡಿ (ಪ್ರಾದೇಶಿಕ) ಮತ್ತು ಪ್ರಾದೇಶಿಕ ಹುದ್ದೆಗಳಿಗೆ ಹೊರತಾದ ಎಲ್ಲಾ ಹುದ್ದೆಗಳು.

(5) "ಸಕ್ಷಮ ಪ್ರಾಧಿಕಾರ" ಎಂದರೆ, ಅರಣ್ಯ ಅಧಿಕಾರಿ ಅಥವಾ ಇತರ ಸಿಬ್ಬಂದಿಗಳನ್ನು ವರ್ಗಾವಣೆ ಮಾಡಲು ಸಕ್ಷಮವಾದ ಪ್ರಾಧಿಕಾರ;

(6) "ಕೌನ್ಸಿಲಿಂಗ್" ಎಂದರೆ, ಲಭ್ಯವಿರುವುದಾಗಿ ಅಧಿಸೂಚಿಸಿದ ಹುದ್ದೆಗಳಲ್ಲಿ ವರ್ಗಾವಣೆ ಅಥವಾ ಸ್ಥಳನಿಯುಕ್ತಿಯ ಮೇರೆಗೆ, ಅರಣ್ಯ ಅಧಿಕಾರಿ ಅಥವಾ ಇತರ ಸಿಬ್ಬಂದಿಯನ್ನು ತನ್ನ ಆಯ್ಕೆಯ ಸ್ಥಳವನ್ನು ಆಯ್ಕೆ ಮಾಡಿಕೊಳ್ಳಲು ಸಮರ್ಥಗೊಳಿಸುವುದು ಮತ್ತು ಮಾರ್ಗದರ್ಶನ ನೀಡುವುದು;

(7) "ಇಲಾಖೆ" ಎಂದರೆ, ಕರ್ನಾಟಕ ಅರಣ್ಯ ಇಲಾಖೆ;

(8) "ಅರಣ್ಯ ಅಧಿಕಾರಿ" ಎಂದರೆ, ಅನುಸೂಚಿ-I ರಲ್ಲಿ ನಿರ್ದಿಷ್ಟಪಡಿಸಿದ ಯಾವುವೇ ಹುದ್ದೆಗಳಿಗೆ ನೇಮಕನಾದ ಒಬ್ಬ ಅಧಿಕಾರಿ;

(9) "ಸಾಮಾನ್ಯ ವರ್ಗಾವಣೆ" ಎಂದರೆ, ಅರಣ್ಯ ಅಧಿಕಾರಿಗಳು ಅಥವಾ ಇತರ ಸಿಬ್ಬಂದಿಯು, ತಮ್ಮ ಸಹಜ ಅಧಿಕಾರಾವಧಿಯನ್ನು ಪೂರ್ಣಗೊಳಿಸಿದ ಅಥವಾ ಖಾಲಿ ಹುದ್ದೆಗೆ ವರ್ಗಾವಣೆಗಾಗಿ ಅಥವಾ ಸ್ಥಳನಿಯುಕ್ತಿಗಾಗಿ ಸರ್ಕಾರವು ಅಧಿಸೂಚಿಸಿದ ಅವಧಿ;

(10) "ಸರ್ಕಾರ" ಎಂದರೆ, ಕರ್ನಾಟಕ ಸರ್ಕಾರ;

(11) "ಸರ್ಕಾರಿ ಸಂಸ್ಥೆ"ಯು ಅರಣ್ಯ ಇಲಾಖೆಗೆ ಸೇರಿರುವ ಯಾವುದೇ ಹೆಸರಿನಿಂದ ಕರೆಯಲಾಗುವ ಮತ್ತು ಸರ್ಕಾರವು ಸ್ಥಾಪಿಸಿರುವ ತರಬೇತಿ ಕೇಂದ್ರ, ಆಡಳಿತ ಕಛೇರಿ ಅಥವಾ ಯಾವುವೇ ಇತರ ಸಂಸ್ಥೆಗಳನ್ನು ಒಳಗೊಳ್ಳುತ್ತದೆ;

(12) "ಅಂತರರಾಜ್ಯ ಗಡಿ" ಎಂದರೆ, ನೆರೆ ರಾಜ್ಯಗಳೊಂದಿಗೆ ಇರುವ ಕರ್ನಾಟಕ ರಾಜ್ಯದ ಗಡಿ;

(13) "ಇತರ ಸಿಬ್ಬಂದಿಗಳು" ಎಂದರೆ, ಅನುಸೂಚಿ-II ರಲ್ಲಿ ನಿರ್ದಿಷ್ಟಪಡಿಸಿದ ಯಾವುವೇ ಹುದ್ದೆಗಳಿಗೆ ನೇಮಕವಾದ ಸಿಬ್ಬಂದಿಗಳು;

(14) "ಹುದ್ದೆ" ಎಂದರೆ, ಕೆಲವು ಸಾರ್ವಜನಿಕ ಕರ್ತವ್ಯಗಳನ್ನು ಮತ್ತು ಜವಾಬ್ದಾರಿಗಳನ್ನು ನಿರ್ವಹಿಸುವುದಕ್ಕೆ ಇಲಾಖೆಯ ಅಧೀನದಲ್ಲಿ ಸರ್ಕಾರವು ಯುಕ್ತವಾಗಿ ಸೃಜಿಸಿರುವ ಹುದ್ದೆ ಅಥವಾ ಅಧಿಕೃತ ಸ್ಥಾನ;

(15) "ನಿಯಮಿಸಲಾದುದು" ಎಂದರೆ, ಸರ್ಕಾರವು ನಿಯಮಗಳ ಮೂಲಕ ನಿಯಮಿಸಲಾದುದು;

(16) "ಅನುಸೂಚಿ" ಎಂದರೆ, ಈ ಅಧಿನಿಯಮದೊಂದಿಗೆ ಲಗತ್ತಾದ ಅನುಸೂಚಿ;

(17) "ಅಧಿಕಾರಾವಧಿ" ಎಂದರೆ, ನಿಯಮಗಳ ಮೂಲಕ ನಿಯಮಿಸಬಹುದಾದಂತೆ ಒಂದು ಸ್ಥಳ ಅಥವಾ ಹುದ್ದೆಯಲ್ಲಿ ಕೆಲಸ ಮಾಡುವುದಕ್ಕೆ ಅಗತ್ಯವಿರುವ ಕನಿಷ್ಠ ಅವಧಿ;

(18) "ಪ್ರಾದೇಶಿಕ ಹುದ್ದೆ" ಎಂದರೆ, ಕರ್ನಾಟಕ ಅರಣ್ಯ ಅಧಿನಿಯಮ, 1963ರ ಮತ್ತು ಕರ್ನಾಟಕ ಅರಣ್ಯ ನಿಯಮಗಳು, 1967ರ ಅಡಿಯಲ್ಲಿ ಶಾಸನಬದ್ಧ ಅಧಿಕಾರಗಳನ್ನು ಹೊಂದಿರುವ ಒಂದು ಹುದ್ದೆ;

(19) "ವರ್ಗಾವಣೆ" ಎಂದರೆ, ಅರಣ್ಯ ಅಧಿಕಾರಿ ಅಥವಾ ಇತರ ಸಿಬ್ಬಂದಿಯನ್ನು ಒಂದು ಸ್ಥಳ ಅಥವಾ ಹುದ್ದೆಯಿಂದ ಇನ್ನೊಂದು ಸ್ಥಳ ಅಥವಾ ಹುದ್ದೆಗೆ ಮಾಡುವ ವರ್ಗಾವಣೆ;

(20) "ವನ್ಯಜೀವಿ ಹುದ್ದೆ" ಎಂದರೆ, ವನ್ಯಜೀವಿ (ಸಂರಕ್ಷಣಾ) ಅಧಿನಿಯಮ, 1972ರ (1972ರ ಕೇಂದ್ರ ಅಧಿನಿಯಮ 53) ಅಡಿಯಲ್ಲಿ ವನ್ಯಜೀವಿ ವಿಭಾಗವೆಂದು ಅಧಿಸೂಚಿಸಿದ ಪ್ರದೇಶದಲ್ಲಿನ ಹುದ್ದೆ;

**3. ಎಲ್ಲಾ ಪ್ರಾರಂಭಿಕ ನೇಮಕಾತಿಗಳು, ವರ್ಗಾವಣೆಗಳು ಮತ್ತು ಸ್ಥಳನಿಯುಕ್ತಿಗಳನ್ನು ಕೌನ್ಸಿಲಿಂಗ್ ಮೂಲಕ ಮಾಡತಕ್ಕದ್ದು.**- (1) ಎಲ್ಲಾ ಅರಣ್ಯ ಅಧಿಕಾರಿಗಳು ಮತ್ತು ಇತರ ಸಿಬ್ಬಂದಿಗಳ ಪ್ರಾರಂಭಿಕ ನೇಮಕಾತಿಗಳು ಮತ್ತು ನಂತರದ ವರ್ಗಾವಣೆಗಳು ಮತ್ತು ಸ್ಥಳ ನಿಯುಕ್ತಿಗಳನ್ನು ನಿಯಮಿಸಲಾದ ವಿಧಾನದಲ್ಲಿ ಕೌನ್ಸಿಲಿಂಗ್ ಪ್ರಕ್ರಿಯೆಯ ಮೂಲಕ ನಡೆಸತಕ್ಕದ್ದು.

(2) ಯಾವೊಬ್ಬ ಅರಣ್ಯ ಅಧಿಕಾರಿ ಅಥವಾ ಇತರ ಸಿಬ್ಬಂದಿಯನ್ನು ಪ್ರಾರಂಭಿಕ ನೇಮಕಾತಿ ಅಥವಾ ಬಡ್ತಿಯ ಮೇಲೆ ಪ್ರವರ್ಗ "ಎ" ಹುದ್ದೆಗಳಿಗೆ ಕಡ್ಡಾಯವಾಗಿ ಸ್ಥಳನಿಯುಕ್ತಿಗೊಳಿಸತಕ್ಕದ್ದು.

(3) ಪ್ರವರ್ಗ "ಎ" ಯಲ್ಲಿಯ ಹುದ್ದೆಗಳಲ್ಲಿ ಕನಿಷ್ಠ ಅಧಿಕಾರಾವಧಿಯನ್ನು ಪೂರ್ಣಗೊಳಿಸಿರುವ ಪ್ರತಿಯೊಬ್ಬ ಅರಣ್ಯ ಅಧಿಕಾರಿ ಅಥವಾ ಇತರ ಸಿಬ್ಬಂದಿಯು ಪ್ರವರ್ಗ "ಬಿ" ಯಲ್ಲಿಯ ಹುದ್ದೆಗೆ ವರ್ಗಾವಣೆ ಅಥವಾ ಸ್ಥಳನಿಯುಕ್ತಿ ಹೊಂದಲು ಅರ್ಹನಾಗಿರತಕ್ಕದ್ದು. ಪ್ರವರ್ಗ "ಬಿ" ಯಲ್ಲಿಯ ಹುದ್ದೆಗಳಲ್ಲಿ ಕನಿಷ್ಠ ಅಧಿಕಾರಾವಧಿಯನ್ನು ಪೂರ್ಣಗೊಳಿಸಿರುವ ಪ್ರತಿಯೊಬ್ಬ ಅರಣ್ಯ ಅಧಿಕಾರಿ ಅಥವಾ ಇತರ ಸಿಬ್ಬಂದಿಯು ಪ್ರವರ್ಗ "ಸಿ" ಯಲ್ಲಿಯ ಹುದ್ದೆಗಳಿಗೆ ವರ್ಗಾವಣೆ ಅಥವಾ ಸ್ಥಳನಿಯುಕ್ತಿ ಹೊಂದಲು ಅರ್ಹನಾಗಿರತಕ್ಕದ್ದು ಮತ್ತು ಪ್ರವರ್ಗ "ಸಿ" ಯಲ್ಲಿಯ ಹುದ್ದೆಗಳಲ್ಲಿ ಕನಿಷ್ಠ ಅಧಿಕಾರಾವಧಿಯನ್ನು ಪೂರ್ಣಗೊಳಿಸಿರುವ ಪ್ರತಿಯೊಬ್ಬ ಅರಣ್ಯ ಅಧಿಕಾರಿ ಅಥವಾ ಇತರ ಸಿಬ್ಬಂದಿಯು ಸರದಿಯ ಮೂಲಕ ಪ್ರವರ್ಗ "ಎ" ಯಲ್ಲಿಯ ಹುದ್ದೆಗಳಿಗೆ ವರ್ಗಾವಣೆ ಅಥವಾ ಸ್ಥಳನಿಯುಕ್ತಿ ಹೊಂದಲು ಅರ್ಹನಾಗಿರತಕ್ಕದ್ದು.

(4) ಈ ಅಧಿನಿಯಮದ ಪ್ರಾರಂಭದ ದಿನಾಂಕದಂದು ಯಾವೊಬ್ಬ ಅರಣ್ಯ ಅಧಿಕಾರಿ ಅಥವಾ ಇತರ ಸಿಬ್ಬಂದಿಯು ಹತ್ತು ವರ್ಷಗಳಿಗೂ ಮೀರಿದ ಸೇವೆಯಲ್ಲಿದ್ದು, ಆದರೆ ಪ್ರವರ್ಗ "ಎ" ಯ ಯಾವುದೇ ಹುದ್ದೆಯಲ್ಲಿ ಸೇವೆ ಸಲ್ಲಿಸಿರದಿದ್ದರೆ, ಕೂಡಲೇ ಆತನನ್ನು ಆದ್ಯತೆಯ ಮೇರೆಗೆ ಪ್ರವರ್ಗ "ಎ" ಹುದ್ದೆಗೆ ವರ್ಗಾಯಿಸತಕ್ಕದ್ದು ಮತ್ತು ಸ್ಥಳನಿಯುಕ್ತಿಗೊಳಿಸತಕ್ಕದ್ದು.

(5) 55 ವರ್ಷಗಳ ವಯಸ್ಸನ್ನು ತಲುಪಿದ ಅರಣ್ಯ ಅಧಿಕಾರಿ ಅಥವಾ ಇತರ ಸಿಬ್ಬಂದಿಯು ಪ್ರವರ್ಗ "ಬಿ" ಮತ್ತು "ಸಿ" ಯಲ್ಲಿನ ಹುದ್ದೆಗಳಲ್ಲಿನ ಸ್ಥಳನಿಯುಕ್ತಿಗೆ ಅಥವಾ ಹುದ್ದೆಗೆ ಅರ್ಹನಾಗಿರತಕ್ಕದ್ದಲ್ಲ:

ಪರಂತು, ಅರಣ್ಯ ಅಧಿಕಾರಿ ಅಥವಾ ಇತರ ಸಿಬ್ಬಂದಿಯು, ಯಾವುದೇ ವೃಂದದಲ್ಲಿ ಆತನ ಪೂರ್ಣ ಸೇವಾವಧಿಯಲ್ಲಿ ಜಾಗೃತಿ ಅಥವಾ ಸಂಚಾರಿ ಅರಣ್ಯ ದಳ ಅಥವಾ ಚೆಕ್‌ಪೋಸ್ಟ್‌ಗೆ ಎರಡು ವರ್ಷಗಳನ್ನು ಮೀರಿದ ಅವಧಿಗಾಗಿ ಸ್ಥಳನಿಯುಕ್ತಿ ಹೊಂದತಕ್ಕದ್ದಲ್ಲ ಮತ್ತು ಈ ಹುದ್ದೆಗಳಿಗೆ ಅವರ ಸ್ವಂತ ಜಿಲ್ಲೆಗಳಲ್ಲಿ ಸ್ಥಳ ನಿಯುಕ್ತಿಗೊಳಿಸತಕ್ಕದ್ದಲ್ಲ.

(6) ಸಕ್ಷಮ ಪ್ರಾಧಿಕಾರವು, 6ನೇ ಪ್ರಕರಣದ (2)ನೇ ಉಪಪ್ರಕರಣದ ಅಡಿಯಲ್ಲಿ ಇರುವ ಅಧಿಕಾರಿಗಳು ಮತ್ತು ಸಿಬ್ಬಂದಿಗಳಿಗೆ ಸಂಬಂಧಿಸಿದಂತೆ (3)ನೇ ಉಪಪ್ರಕರಣವನ್ನು ಸಡಿಲಿಸಬಹುದು.

**4. ಸಾರ್ವಜನಿಕ ಹಿತಾಸಕ್ತಿಯಲ್ಲಿ ಅರಣ್ಯ ಅಧಿಕಾರಿಗಳು ಮತ್ತು ಇತರ ಸಿಬ್ಬಂದಿಯ ವರ್ಗಾವಣೆ.**- ಸಾಮಾನ್ಯವಾಗಿ, ವರ್ಗಾವಣೆಗಳನ್ನು ಸಾಮಾನ್ಯ ವರ್ಗಾವಣೆ ಅವಧಿಯಲ್ಲಿ ಮಾಡತಕ್ಕದ್ದು. ಯಾವುದೇ ನಿರ್ದಿಷ್ಟ ಅರಣ್ಯ ಪ್ರದೇಶ ಅಥವಾ ನಿರ್ದಿಷ್ಟ ಕಛೇರಿಯ ನಿರ್ವಹಣೆಗಾಗಿ ಸಕ್ಷಮ ಪ್ರಾಧಿಕಾರವು ಅಧಿಸೂಚಿಸಬಹುದಾದ, ಇಲಾಖೆಯಲ್ಲಿನ ಯಾವುದೇ ಹುದ್ದೆಯನ್ನು ಅಪಾಯ ಸಂಭವವಿರುವ (critical) ಹುದ್ದೆಯೆಂಬುದಾಗಿ ಪರಿಗಣಿಸಿದ್ದಲ್ಲಿ ಮತ್ತು ಸಾಮಾನ್ಯ ವರ್ಗಾವಣೆ ಅವಧಿಯಲ್ಲಿ ಯಾವೊಬ್ಬ ಸೂಕ್ತ ವ್ಯಕ್ತಿಯು ಆ ಹುದ್ದೆಯನ್ನು ಆಯ್ಕೆಮಾಡಿಕೊಳ್ಳದಿದ್ದಲ್ಲಿ, ಅರ್ಹ ಅರಣ್ಯ ಅಧಿಕಾರಿಗಳು ಅಥವಾ ಸಂದರ್ಭಾನುಸಾರವಾಗಿ ಇತರ ಸಿಬ್ಬಂದಿಗಳಲ್ಲಿ ಯಾವೊಬ್ಬ ಸೂಕ್ತ ವ್ಯಕ್ತಿಯನ್ನು ಆ ಹುದ್ದೆಗೆ ಸಾರ್ವಜನಿಕ ಹಿತಾಸಕ್ತಿಯಲ್ಲಿ ಸಕ್ಷಮ ಪ್ರಾಧಿಕಾರವು ಸ್ವಪ್ರೇರಣೆಯಿಂದ ನೇಮಕ ಮಾಡಬಹುದು.

**5. ಹುದ್ದೆಗಳ ಕೆಲವು ಪ್ರವರ್ಗದಲ್ಲಿ ಕ್ರಮಾನುಗತ ಸ್ಥಳನಿಯುಕ್ತಿ ಮಾಡುವುದರ ಮೇಲೆ ನಿಷೇಧ.**-ಯಾವೊಬ್ಬ ಅಧಿಕಾರಿ ಅಥವಾ ಸಿಬ್ಬಂದಿಯನ್ನು ಕ್ರಮಾನುಗತವಾಗಿ ಒಂದಕ್ಕಿಂತ ಹೆಚ್ಚು ಸಲ ಯಾವುದೇ ಪ್ರವರ್ಗ "ಬಿ" ಅಥವಾ ಪ್ರವರ್ಗ "ಸಿ" ಹುದ್ದೆಗೆ ಸ್ಥಳನಿಯುಕ್ತಿಗೊಳಿಸತಕ್ಕದ್ದಲ್ಲ.

**6. ಪ್ರತಿಯೊಂದು ಸ್ಥಳನಿಯುಕ್ತಿಯ ಅಧಿಕಾರಾವಧಿ ಮತ್ತು ಕೆಲವು ಇತರ ವಿನಾಯಿತಿಗಳು.**- (1) ಹುದ್ದೆಗಳ ಪ್ರತಿಯೊಂದು ಪ್ರವರ್ಗಕ್ಕಾಗಿನ ಅಧಿಕಾರಾವಧಿಯು ನಿಯಮಗಳ ಮೂಲಕ ನಿಯಮಿಸಲಾದಂತೆ ಇರತಕ್ಕದ್ದು. ಪ್ರತಿಯೊಬ್ಬ ಅರಣ್ಯ ಅಧಿಕಾರಿ ಅಥವಾ ಇತರ ಸಿಬ್ಬಂದಿಗೆ, ಆತನ ವಿರುದ್ಧ ಶಿಸ್ತು ನಡವಳಿಗಳನ್ನು ಉದ್ದೇಶಿಸಿದ ಅಥವಾ ಆರಂಭಿಸಿದ ಪ್ರಕರಣಗಳನ್ನು ಹೊರತುಪಡಿಸಿ, ಆತನ ಅಧಿಕಾರಾವಧಿಯನ್ನು ಪೂರ್ಣಗೊಳಿಸುವ ಅವಕಾಶವನ್ನು ನೀಡತಕ್ಕದ್ದು.

(2) ಈ ಮುಂದಿನ ಸಂದರ್ಭಗಳಲ್ಲಿ ಎಂದರೆ:–

(i) ಪತಿ ಮತ್ತು ಪತ್ನಿಯರಿಬ್ಬರು ರಾಜ್ಯ ಸರ್ಕಾರ ಅಥವಾ ಕೇಂದ್ರ ಸರ್ಕಾರದ ನೌಕರರಾಗಿರುವ ಸಂದರ್ಭದಲ್ಲಿ ಮತ್ತು ದಂಪತಿಗಳಲ್ಲಿ ಒಬ್ಬರು ಬೇರೆ ಸ್ಥಳದಲ್ಲಿ ಕೆಲಸ ಮಾಡುತ್ತಿದ್ದರೆ, ಆಗ ಇನ್ನೊಬ್ಬರನ್ನು ಸ್ಪಷ್ಟ ಖಾಲಿ ಹುದ್ದೆಯ ಲಭ್ಯತೆಗೆ ಒಳಪಟ್ಟು, ಆತನು ಅದೇ ಸ್ಥಳದಲ್ಲಿದ್ದರೆ, ಅದೇ ಸ್ಥಳಕ್ಕೆ ಅಥವಾ ಹತ್ತಿರದ ಸ್ಥಳಕ್ಕೆ ವರ್ಗಾಯಿಸಬಹುದಾದ ಪ್ರಕರಣಕ್ಕೆ;

(ii) ಆಕೆಯು ವಿಧವೆಯಾಗಿದ್ದರೆ ಆ ನೌಕರಳಿಗೆ;

(iii) ಅವರು ವಿಕಲಚೇತನರಾಗಿದ್ದರೆ ಆ ನೌಕರರಿಗೆ;

(iv) ನೌಕರನ ಪತ್ನಿ ಅಥವಾ ಮಕ್ಕಳು ಗಂಭೀರ ಖಾಯಿಲೆಯಿಂದ ನರಳುತ್ತಿದ್ದು, ಅದಕ್ಕಾಗಿ ಆತನು ಕಾರ್ಯನಿರ್ವಹಿಸುತ್ತಿರುವ ಸ್ಥಳದಲ್ಲಿ ವೈದ್ಯಕೀಯ ಚಿಕಿತ್ಸೆ ಲಭ್ಯವಿರದಿರುವ ಮತ್ತು ಅಗತ್ಯ ವೈದ್ಯಕೀಯ ಚಿಕಿತ್ಸೆ ಒದಗಿಸುವ ಸಲುವಾಗಿ ಅಂಥ ಚಿಕಿತ್ಸೆ ಲಭ್ಯವಿರುವ ಸ್ಥಳಕ್ಕೆ ವರ್ಗಾವಣೆ ಮಾಡುವುದು ಅವಶ್ಯಕವಾಗಿರುವ ನೌಕರನಿಗೆ,

–ನಿಯಮಗಳಲ್ಲಿ ರಚಿಸಲಾದ ಉಪಬಂಧಗಳಿಗೆ ಅನುಸಾರವಾಗಿ ಅಧಿಕಾರವಧಿಯ ಅಗತ್ಯತೆಯನ್ನು ಬಿಟ್ಟುಕೊಡಬಹುದು ಅಥವಾ ಸಡಿಲಗೊಳಿಸಬಹುದು:

ಪರಂತು, ಖಾಯಿಲೆಯ ಸ್ವರೂಪವನ್ನು ನಿರ್ದಿಷ್ಟಪಡಿಸಿ, ಆತನು ಕಾರ್ಯನಿರ್ವಹಿಸುತ್ತಿರುವ ಸ್ಥಳದಲ್ಲಿ ಅಗತ್ಯ ಚಿಕಿತ್ಸೆ ಲಭ್ಯವಿಲ್ಲವೆಂಬ ಪ್ರಮಾಣೀಕರಿಸಿ ಹೇಳಿ, ಯಾವ ಹತ್ತಿರದ ಸ್ಥಳದಲ್ಲಿ ಅಗತ್ಯ ಚಿಕಿತ್ಸೆ ಲಭ್ಯವಿಯೆಂದು ನಿರ್ದಿಷ್ಟಪಡಿಸಿ ಮತ್ತು ಅಗತ್ಯ ವೈದ್ಯಕೀಯ ಚಿಕಿತ್ಸೆಯನ್ನು ಆತನಿಗೆ ಒದಗಿಸುವ ಅಂಥ ಸ್ಥಳಕ್ಕೆ ಆತನನ್ನು ವರ್ಗಾವಣೆ ಮಾಡುವುದು ಅವಶ್ಯಕವೆಂದು ಪ್ರಮಾಣಿಕರಿಸಿ, ಜಿಲ್ಲಾ ವೈದ್ಯಕೀಯ ಮಂಡಳಿಯಿಂದ ಪಡೆದ ಪ್ರಮಾಣ ಪತ್ರವನ್ನು ಸಂಬಂಧಪಟ್ಟ ನೌಕರನು ಹಾಜರುಪಡಿಸಿದ ಹೊರತು ಯಾವುದೇ ವರ್ಗಾವಣೆಗಳನ್ನು ಪರಿಗಣಿಸತಕ್ಕದಲ್ಲ.

(3) ಯಾವೊಬ್ಬ ಅರಣ್ಯ ಅಧಿಕಾರಿ ಅಥವಾ ಇತರ ಸಿಬ್ಬಂದಿಯು, ವಯೋನಿವೃತ್ತಿಗೆ ಮೊದಲು ಕೊನೆಯ ಎರಡು ವರ್ಷಗಳ ಅವಧಿಯ ಹೊರತು ತನ್ನ ಸ್ವಂತ ತಾಲ್ಲೂಕಿನಲ್ಲಿ ನಿಯೋಜನೆಗೆ ಹಕ್ಕುಳ್ಳವರಾಗಿರತಕ್ಕದಲ್ಲ.

(4) ಯಾವುದೇ ಅರಣ್ಯ ಅಧಿಕಾರಿ ಅಥವಾ ಇತರ ಸಿಬ್ಬಂದಿಯನ್ನು ಆತನು ಅಮಾನತುಗೊಂಡು ಪುನರ್‌ಸ್ಥಾಪಿತವಾದ ತರುವಾಯ ಅದೇ ಹುದ್ದೆಗೆ ಅಥವಾ ಯಾವುದೇ ಪ್ರವರ್ಗ "ಬಿ" ಮತ್ತು "ಸಿ" ಹುದ್ದೆಗೆ ಸ್ಥಳನಿಯುಕ್ತಿಗೊಳಿಸತಕ್ಕದ್ದಲ್ಲ.

**7. ಪ್ರತಿನಿಯೋಜನೆಯ ನಿಯಂತ್ರಣ.–** ಒಂದು ಕಛೇರಿಯಿಂದ ಇನ್ನೊಂದು ಕಛೇರಿಗೆ ಪ್ರತಿನಿಯೋಜನೆಯು ಅತ್ಯಾವಶ್ಯಕವಾಗಿರುವ ತಪ್ಪಿಸಲಾಗದ ಸಂದರ್ಭಗಳಿರುವಲ್ಲಿ, ಆಗ ಅಧಿಕಾರಿಗಳ ಅಥವಾ ಸಿಬ್ಬಂದಿಗಳ ಅಂಥ ನಿಯೋಜನೆಯನ್ನು ಹುದ್ದೆಗಳ ಅದೇ ಪ್ರವರ್ಗದಲ್ಲಿ ಮಾಡತಕ್ಕದ್ದು.

**8. ಸಕ್ಷಮ ಪ್ರಾಧಿಕಾರದ ಅಧಿಕಾರಗಳು.–** ಸಕ್ಷಮ ಪ್ರಾಧಿಕಾರವು, ಈ ಮುಂದಿನ ಸಂದರ್ಭಗಳಲ್ಲಿ, ಎಂದರೆ:–

(ಎ) ಶಿಸ್ತು ಕ್ರಮದ ಅಥವಾ ವ್ಯವಹರಣೆಗಳ ಸಂದರ್ಭದಲ್ಲಿ; ಅಥವಾ

(ಬಿ) ಮರು–ನಿಯೋಜನೆಯ ಕಾರಣದ ಪರಿಣಾಮವಾಗಿ ಹೆಚ್ಚುವರಿ ಸಿಬ್ಬಂದಿ ಅಥವಾ ಹುದ್ದೆಗಳು ಯಾವುವಾದರೂ ಇದ್ದರೆ,

– ಮಾತ್ರ ಸ್ಪಷ್ಟ ಖಾಲಿ ಹುದ್ದೆಗಳಿಗೆ ಸಾಮಾನ್ಯ ವರ್ಗಾವಣೆ ಹೊರತುಪಡಿಸಿದ ಕಾಲಾವಧಿಯಲ್ಲಿ ಅರಣ್ಯ ಅಧಿಕಾರಿಗಳ ಮತ್ತು ಇತರ ಸಿಬ್ಬಂದಿಯ ವರ್ಗಾವಣೆ ಅಥವಾ ನಿಯೋಜನೆಯನ್ನು ಜಾರಿಗೆ ತರಲು ಅಧಿಕಾರವನ್ನು ಹೊಂದಿರುತ್ತದೆ.

**9. ದಂಡಗಳು.–** ಈ ಅಧಿನಿಯಮದ ಅಥವಾ ಅದರ ಅಡಿಯಲ್ಲಿ ರಚಿಸಲಾದ ನಿಯಮಗಳ ಉಪಬಂಧಗಳನ್ನು ಉಲ್ಲಂಘಿಸಿ ಸ್ಥಳನಿಯುಕ್ತಿ ಅಥವಾ ನೇಮಕಾತಿ ಅಥವಾ ವರ್ಗಾವಣೆಯ ಆದೇಶವನ್ನು ಯಾವೊಬ್ಬ ಸಕ್ಷಮ ಪ್ರಾಧಿಕಾರವು ಅಥವಾ ಯಾವೊಬ್ಬ ಸರ್ಕಾರಿ ನೌಕರನು ಮಾಡಿದರೆ, ಅಂಥ ಸಕ್ಷಮ ಪ್ರಾಧಿಕಾರವು ಅಥವಾ ಸಂದರ್ಭಾನುಸಾರವಾಗಿ ಸರ್ಕಾರಿ ನೌಕರನು ಅಂಥ ಸಿವಿಲ್ ನೌಕರನಿಗೆ ಅನ್ವಯವಾಗುವ ಸಂಬಂಧಪಟ್ಟ ಶಿಸ್ತು ನಿಯಮಗಳ ಅಡಿಯಲ್ಲಿ ಶಿಸ್ತು ಕ್ರಮಕ್ಕೆ ಗುರಿಯಾಗತಕ್ಕದ್ದು.

**10. ತೊಂದರೆಗಳನ್ನು ನಿವಾರಿಸಲು ಅಧಿಕಾರ.–** ಈ ಅಧಿನಿಯಮದ ಉಪಬಂಧಗಳನ್ನು ಕಾರ್ಯರೂಪಕ್ಕೆ ತರುವಲ್ಲಿ ಯಾವುದೇ ತೊಂದರೆ ಉದ್ಭವಿಸಿದಲ್ಲಿ, ಸರ್ಕಾರವು, ಸರ್ಕಾರಿ ರಾಜ್ಯಪತ್ರದಲ್ಲಿ ಪ್ರಕಟಿಸಿದ ಆದೇಶದ ಮೂಲಕ, ಈ ಅಧಿನಿಯಮದ ಉಪಬಂಧಗಳಿಗೆ ಅಸಂಗತವಾಗಿರದಂಥ ಮತ್ತು ತೊಂದರೆಗಳನ್ನು ನಿವಾರಿಸಲು ತನಗೆ ಅವಶ್ಯಕ ಅಥವಾ ಯುಕ್ತವೆಂದು ಕಂಡುಬರುವ ಅಂಥ ಉಪಬಂಧಗಳನ್ನು ರಚಿಸಬಹುದು:

ಪರಂತು, ಅಂಥ ಯಾವುದೇ ಆದೇಶವನ್ನು, ಈ ಅಧಿನಿಯಮವು ಪ್ರಾರಂಭವಾದ ದಿನಾಂಕದಿಂದ ಎರಡು ವರ್ಷಗಳ ಅವಧಿಯು ಮುಕ್ತಾಯಗೊಂಡ ತರುವಾಯ ಮಾಡತಕ್ಕದ್ದಲ್ಲ.

**11. ಅನುಸೂಚಿಯನ್ನು ತಿದ್ದುಪಡಿ ಮಾಡಲು ಅಧಿಕಾರ.–** ಸರ್ಕಾರವು, ಅಧಿಸೂಚನೆಯ ಮೂಲಕ ಅನುಸೂಚಿ-I ಮತ್ತು IIರಲ್ಲಿ ನಿರ್ದಿಷ್ಟಪಡಿಸಿದ ಯಾವುವೇ ನಮೂದುಗಳನ್ನು ಸೇರಿಸಬಹುದು ಅಥವಾ ಮಾರ್ಪಡಿಸಬಹುದು.

**12. ಸದ್ಭಾವನೆಯಲ್ಲಿ ಕೈಗೊಂಡ ಕ್ರಮದ ರಕ್ಷಣೆ.–** ಈ ಅಧಿನಿಯಮದ ಅಡಿಯಲ್ಲಿ ಸದ್ಭಾವನೆಯಿಂದ ಕೈಗೊಂಡ ಅಥವಾ ಕೈಗೊಳ್ಳಲು ಉದ್ದೇಶಿಸಲಾದ ಯಾವುದೇ ಕ್ರಮದ ಬಗ್ಗೆ ಸರ್ಕಾರದ ಯಾವೊಬ್ಬ ಅಧಿಕಾರಿಯ ವಿರುದ್ಧ ಯಾವುದೇ ದಾವೆ, ಅಭಿಯೋಜನೆ ಅಥವಾ ಇತರ ಕಾನೂನು ವ್ಯವಹರಣೆಗಳನ್ನು ಕೈಗೊಳ್ಳತಕ್ಕದ್ದಲ್ಲ.

**13. ನಿಯಮಗಳ ರಚನಾಧಿಕಾರ.–** (1) ಸರ್ಕಾರವು, ಈ ಅಧಿನಿಯಮದ ಉದ್ದೇಶಗಳನ್ನು ಈಡೇರಿಸುವುದಕ್ಕಾಗಿ, ಅಧಿಸೂಚನೆಯ ಮೂಲಕ ಮತ್ತು ಪೂರ್ವಪ್ರಕಟಣೆಯನ್ನು ನೀಡಿದ ತರುವಾಯ ನಿಯಮಗಳನ್ನು ರಚಿಸಬಹುದು.

(2) ಈ ಅಧಿನಿಯಮದ ಅಡಿಯಲ್ಲಿ ಮಾಡಿದ ಎಲ್ಲ ನಿಯಮಗಳನ್ನು ಅವುಗಳನ್ನು ರಚಿಸಿದ ತರುವಾಯ ಆದಷ್ಟು ಬೇಗನೆ ರಾಜ್ಯ ವಿಧಾನಮಂಡಲದ ಮುಂದೆ ಅದು ಅಧಿವೇಶನದಲ್ಲಿದ್ದರೆ ಮಂಡಿಸತಕ್ಕದ್ದು ಮತ್ತು ಅದು ಅಧಿವೇಶನದಲ್ಲಿಲ್ಲದಿದ್ದರೆ, ಆಗ ಒಂದು ಅಧಿವೇಶನ ಅಥವಾ ಎರಡು ನಿರಂತರ ಅಧಿವೇಶನಗಳಲ್ಲಿ ಅಡಕವಾಗಬಹುದಾದಂಥ ಒಟ್ಟು ಹದಿನಾಲ್ಕು ದಿವಸಗಳ ಅವಧಿಯವರೆಗಿನ ತಕ್ಷಣದ ಅಧಿವೇಶನದಲ್ಲಿ ಮಂಡಿಸತಕ್ಕದ್ದು ಮತ್ತು ಅದನ್ನು ಹಾಗೆ ಇಡಲಾದ ಅಥವಾ ನಿಕಟಪೂರ್ವದ ಅಧಿವೇಶನ ಕೊನೆಗೊಳ್ಳುವ ಮೊದಲು ರಾಜ್ಯ ವಿಧಾನ ಮಂಡಲವು ನಿಯಮದಲ್ಲಿ ಯಾವುದೇ ಮಾರ್ಪಾಡನ್ನು ಮಾಡಲು ಅಥವಾ ನಿಯಮದ ರದ್ದತಿಗೆ ಒಪ್ಪಿದರೆ, ನಿಯಮವು, ಮಾರ್ಪಾಡನ್ನು ಅಥವಾ ರದ್ಧತಿಯನ್ನು ಅಧಿಸೂಚಿಸಿದ ದಿನಾಂಕದಿಂದ, ಅಂಥ ಮಾರ್ಪಾಡಾದ ರೂಪದಲ್ಲಿ ಮಾತ್ರ ಜಾರಿಗೆ ಬರತಕ್ಕದ್ದು ಅಥವಾ ಸಂದರ್ಭಾನುಸಾರ ರದ್ದಾಗತಕ್ಕದ್ದು. ಆದಾಗ್ಯೂ, ಯಾವುದೇ ಅಂಥ ಮಾರ್ಪಾಡು ಅಥವಾ ರದ್ದತಿಯು, ಆ ನಿಯಮದ ಅಡಿಯಲ್ಲಿ ಹಿಂದೆ ಮಾಡಿದ ಯಾವುದರ ಸಿಂಧುತ್ವಕ್ಕೂ ಬಾಧಕವಾಗತಕ್ಕದ್ದಲ್ಲ.

**14. ಇತರ ಕಾನೂನುಗಳ ಮೇಲೆ ಅಧ್ಯಾರೋಹಿ ಪರಿಣಾಮ.–** ಈ ಅಧಿನಿಯಮದ ಉಪಬಂಧಗಳು, ತತ್ಕಾಲದಲ್ಲಿ ಜಾರಿಯಲ್ಲಿರುವ ರಾಜ್ಯದ ಯಾವುದೇ ಇತರ ಕಾನೂನಿನಲ್ಲಿ ಅದಕ್ಕೆ ಅಸಂಗತವಾಗಿರುವುದು ಏನೇ ಇದ್ದರೂ, ಪರಿಣಾಮಕಾರಿಯಾಗಿರತಕ್ಕದ್ದು.

**ಅನುಸೂಚಿ–I**

(2(8)ನೇ ಪ್ರಕರಣವನ್ನು ಮತ್ತು 11ನೇ ಪ್ರಕರಣವನ್ನು ನೋಡಿ)

**ಅರಣ್ಯ ಅಧಿಕಾರಿಗಳ ಪಟ್ಟಿ**

| ಕ್ರಮ ಸಂಖ್ಯೆ | ಹುದ್ದೆಗಳ ಪ್ರವರ್ಗ |
|---|---|
| 1. | ಉಪವಲಯ ಅರಣ್ಯ ಅಧಿಕಾರಿಗಳು |
| 2. | ಅರಣ್ಯ ರಕ್ಷಕರು |
| 3. | ಅರಣ್ಯ ಕಾವಲುಗಾರರು |

**ಅನುಸೂಚಿ–II**

(2(13)ನೇ ಪ್ರಕರಣವನ್ನು ಮತ್ತು 11ನೇ ಪ್ರಕರಣವನ್ನು ನೋಡಿ)

**ಇತರ ಸಿಬ್ಬಂದಿಗಳ ಪಟ್ಟಿ**

| ಕ್ರಮ ಸಂಖ್ಯೆ | ಹುದ್ದೆಗಳ ಪ್ರವರ್ಗ |
|---|---|
| 1 | ಸರ್ಕಾರವು ಅಧಿಸೂಚಿಸಬಹುದಾದ ಅಂಥ ವರ್ಗದ ಹುದ್ದೆಗಳು. |

**ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ**

ಈ ಮುಂದಿನ ಉದ್ದೇಶಗಳನ್ನು ಸಾಧಿಸಲು, ಎಂದರೆ:–

(ಎ) ವರ್ಗಾವಣೆಗಳ ಸಮಯದಲ್ಲಿ ಕೆಳ ಹಂತದ ಸಿಬ್ಬಂದಿಗಳಿಗೆ ಅವರುಗಳ ಆಯ್ಕೆಯ ಸ್ಥಳವನ್ನು ಆರಿಸಿಕೊಳ್ಳುವಲ್ಲಿ ಸಮಾನ ಅವಕಾಶವನ್ನು ಕಲ್ಪಿಸಲು; ಮತ್ತು

(ಬಿ) ಸಿಬ್ಬಂದಿಯಲ್ಲಿ ಕಾರ್ಯಕ್ಷಮತೆ ಮತ್ತು ಶಿಸ್ತನ್ನು ವೃದ್ಧಿಸಲು,

– ಅರಣ್ಯ ಇಲಾಖೆಯ ಉಪವಲಯ ಅರಣ್ಯ ಅಧಿಕಾರಿಗಳು, ಅರಣ್ಯ ರಕ್ಷಕರು ಮತ್ತು ಅರಣ್ಯ ಕಾವಲುಗಾರರ ವರ್ಗಾವಣೆ ಮತ್ತು ಸ್ಥಳನಿಯುಕ್ತಿಯನ್ನು ನಿಯಂತ್ರಿಸುವುದು ಅವಶ್ಯಕವೆಂದು ಪರಿಗಣಿಸಿದೆ.

ಆದ್ದರಿಂದ, ಈ ವಿಧೇಯಕ.

## ಆರ್ಥಿಕ ಜ್ಞಾಪನ ಪತ್ರ

ಪ್ರಸ್ತಾವಿತ ಶಾಸನಾತ್ಮಕ ಕ್ರಮವು ಯಾವುದೇ ಹೆಚ್ಚಿನ ವೆಚ್ಚವನ್ನು ಒಳಗೊಂಡಿರುವುದಿಲ್ಲ.

## ಪ್ರತ್ಯಾಯೋಜಿತ ಶಾಸನ ರಚನೆಗೆ ಸಂಬಂಧಿಸಿದ ಜ್ಞಾಪನಪತ್ರ

| | |
|---|---|
| ಖಂಡ 2: | 2ನೇ ಖಂಡದ (17)ನೇ ಉಪಖಂಡವು, ಒಂದು ಸ್ಥಳ ಅಥವಾ ಹುದ್ದೆಯಲ್ಲಿ ಕೆಲಸ ಮಾಡುವುದಕ್ಕೆ ಅಗತ್ಯವಿರುವ ಕನಿಷ್ಠ ಅವಧಿಯ ಕುರಿತಂತೆ ನಿಯಮಗಳನ್ನು ರಚಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ. |
| ಖಂಡ 3: | (1)ನೇ ಉಪಖಂಡವು ಕೌನ್ಸಿಲಿಂಗ್ ಪ್ರಕ್ರಿಯೆಯ ವಿಧಾನದ ಕುರಿತಂತೆ ನಿಯಮಗಳನ್ನು ರಚಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ. |
| ಖಂಡ 6: | (1)ನೇ ಉಪಖಂಡವು ಪ್ರತಿಯೊಂದು ಪ್ರವರ್ಗದ ಹುದ್ದೆಗಳ ಅಧಿಕಾರಾವಧಿಯ ಕುರಿತಂತೆ ನಿಯಮಗಳನ್ನು ರಚಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ. |
| ಖಂಡ 13: | (1)ನೇ ಉಪಖಂಡವು ಅಧಿನಿಯಮದ ಉದ್ದೇಶಗಳನ್ನು ಈಡೇರಿಸುವುದಕ್ಕಾಗಿ ಪೂರ್ವ ಪ್ರಕಟಣೆಯ ತರುವಾಯ, ನಿಯಮಗಳನ್ನು ರಚಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ. |

ಪ್ರಸ್ತಾವಿತ ಶಾಸನ ರಚನಾಧಿಕಾರದ ಪ್ರತ್ಯಾಯೋಜನೆಯು ವಾಡಿಕೆಯ ಸ್ವರೂಪದ್ದಾಗಿದೆ.

**ಬಿ. ರಮಾನಾಥ ರೈ**
ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು

**ಎಸ್. ಮೂರ್ತಿ**
ಕಾರ್ಯದರ್ಶಿ (ಪ್ರ)
ಕರ್ನಾಟಕ ವಿಧಾನಸಭೆ

ಸರ್ಕಾರಿ ಮುದ್ರಣಾಲಯ, ಸುವರ್ಣ ಸೌಧ ಘಟಕ, ಬೆಳಗಾವಿ, ಪಿ7, ಕಾಸೂ , 1000–ಪ್ರತಿಗಳು 21ನೇ ನವೆಂಬರ್, 2016

**KARNATAKA LEGISLATIVE ASSEMBLY**
**FOURTEENTH LEGISLATIVE ASSEMBLY**
**TWELFTH SESSION**

# THE KARNATAKA STATE CIVIL SERVICES (REGULATION OF TRANSFERS AND POSTINGS OF FOREST OFFICERS AND OTHER OFFICIALS) BILL, 2016

**(L.A. Bill No. 34 of 2016)**

A Bill to provide for regulation of transfers and postings of forest officers and other officials of the Department of Forest in critical and other areas.

Whereas, it is expedient to provide for regulation of transfer of forest officers and other officials of the Department of Forest in critical and other areas and for the matters connected therewith or incidental thereto;

Be it enacted by the Karnataka State Legislature in the sixty-seventh year of the Republic of India as follows;

**1. Short title and commencement**.- (1) This Act may be called the Karnataka State Civil Services (Regulation of Transfer of Forest Officers and other officials) Act, 2016.

(2) It shall come into force from such date as the State Government may, by notification, appoint.

**2. Definitions**.- In this Act, unless the context otherwise requires,-

(1) "Appointment" means appointment by direct recruitment or by promotion on officiating basis of Forest Officer or other officials;

(2) "Appointing authority" means the authority competent to make appointment to the respective cadres;

(3) "Category of post" means a class of posts as specified below, namely:-

**Categorization of Posts specified in Schedule I – officers and officials**

| | | |
|---|---|---|
| Category 'A' | Collateral posts. | Posts other than those specified in category 'B' and 'C', based on the cadres of the Forest department |
| Category 'B' | Wildlife posts and Interstate boundary (territorial) posts. | Posts of Wildlife Division and Interstate boundary (territorial) |
| Category 'C' | Territorial posts. | Posts having statutory powers under the Karnataka Forest Act, 1964 and Rules made there under. |

**Categorization of Posts specified in Schedule II – Other Officials**

| | |
|---|---|
| Category 'A' | Posts other than those posts specified in category 'B' and 'C' location |
| Category 'B' | Posts in Taluk Headquarters |
| Category 'C' | Posts in District, Division, Circle or State Headquarters. |

(4) "Collateral Posts" means all posts other than (wildlife, interstate boundary (Territorial) and territorial posts);

(5) "Competent authority" means the authority competent to make transfer of a Forest Officer or other officials;

(6) "Counseling" means enabling and guiding a forest officer or other official to opt for a place of his choice on transfer or posting from among the posts notified as available;

(7) "Department" means Karnataka Forest Department;

(8) "Forest Officer" means an officer appointed to any of the posts specified in Schedule I;

(9) "General Transfer" means the period notified by the Government for transfer or posting of Forest officers or other staff who have completed their normal tenure or to a vacant post;

(10) "Government" means the Government of Karnataka;

(11) "Government Institution" includes a Training center, an administrative office or any other institution by whatever name called and established by the Government belonging to Forest Department;

(12) "Interstate boundary" means Karnataka State boundary with Neighboring States;

(13) "Other officials" means officials appointed to any of the posts specified in Schedule II;

(14) "Post" means post or an official position duly created by Government under the Department to discharge certain public duties and responsibilities;

(15) "Prescribed" means prescribed by rules by the Government;

(16) "Schedule" means schedule appended to this Act;

(17) "Tenure" means the minimum period required to work in a place or post as may be prescribed by rules;

(18) "Territorial post" means a post having statutory Powers under the Karnataka Forest Act, 1963 and the Karnataka Forest Rules, 1967;

(19) "Transfer" means transfer of a forest officer or other official from one place or post to another place or post;

(20) "Wildlife post" means a post in the area notified as wildlife division under Wildlife (Protection) Act, 1972 (Central Act 53 of 1972).

**3. All initial appointments, transfers and postings shall be done through counseling**. - (1) All Initial appointments and subsequent transfers and postings of all Forest officers and other officials shall be done through a process of counseling conducted in the prescribed manner.

(2) Any Forest officer or other official on initial appointment or promotion shall be compulsorily posted to category 'A' posts.

(3) Every Forest officer or other official who has completed the minimum tenure in a category 'A' post shall be entitled for transfer or posting to category 'B' post. Every Forest officer or other official who has completed minimum tenure in category 'B' posts shall be entitled for transfer or posting to category 'C' posts and every Forest officer or other official who has completed minimum tenure in category 'C' posts shall be eligible to be transferred or posted to category 'A' posts by rotation.

(4) Any Forest officer or other official, who is in service on the date of commencement of this Act and has put in more than ten years but has not served in any Category 'A' post shall be transferred and posted to a Category 'A' post forthwith on priority.

(5) No Forest officer or other official who has attained the age of 55 years shall be entitled for posting to a post in category 'B' and 'C'.

Provided that, no forest officer or other official, during his entire service in any cadre, shall be posted to a Vigilance or Forest Mobile Squad or Check Post for a period exceeding two years and also shall not be posted to these posts in their native districts.

(6) The Competent Authority may relax sub-section (3) in respect of officers and officials covered under sub-section(2) of section 6.

**4. Transfer of Forest Officer or Other officials in Public interest**.- Generally transfers shall be done during general transfer period. If any post in the department is considered as critical post as may be notified by the Competent Authority for the management of any particular forest area or a particular office and if no suitable person has opted to work in that post during general transfers, the Competent Authority may *suo-moto* appoint any suitable person to that post in public interest from among the eligible forest officers or other officials as the case may be.

**5. Bar on consecutive posting in certain category of posts**.- No officer or official shall be posted to any category B or category C post more than once consecutively.

**6. Tenure of each posting and certain other exemptions**.- (1) The tenure for each category of posts shall be as prescribed by rules. Every Forest officer or other official shall be given the opportunity to complete his

tenure except in cases where disciplinary proceedings are contemplated or initiated against him.

(2) Tenure requirements may be waived or relaxed in accordance with the provisions made in the rules in following cases, namely:-

(i) in the case of both husband and wife being State Government or Central Government employees and if one of the spouse is working in a different place, then the other spouse may be transferred to the same place or nearby place if he is in the same place subject to availability of clear vacancy;

(ii) if an employee is a widow;

(iii) if an employee is physically challenged;

(iv) if an employee has spouse or children and they are suffering from serious ailment, for which medical treatment is not available at his place of work and his transfer is necessary to a place where such treatment is available so as to provide the required medical treatment:

Provided that, no transfers shall be considered unless the concerned employee produces a certificate from the District Medical Board Specifying the nature of ailment, certifiying the fact that the required treatment is not available at his place of work, specifying the nearest place where the required treatment is available and certifying that his transfer is necessary to such a place to provide him the required medical treatment.

(3) No forest officer or other official shall be entitled for a posting in his native taluk except during the last two years before superannuation.

(4) No forest officer or other official who was suspended shall be posted to the same post from which he was suspended or to any post in category B and C after reinstatement.

**7. Regulation of Deputation**.- In unavoidable circumstances where deputation from one office to another office becomes absolutely necessary, then such deputation of officers or officials shall be made within the same category of posts.

**8. Powers of Competent Authority.-** The Competent Authority is empowered to effect the transfer or postings of Forest officers and other officials during the period other than General transfer to a clear vacancies only in the following cases, namely:-

(a) in the event of disciplinary action or proceedings; or

(b) consequent on the re-deployment of surplus staff or posts, if any,

**9. Penalties.-** If, any competent authority makes or any Government servant makes an order of posting or appointment or transfer in contravention of the provisions of this Act or the rules made thereunder, such competent authority or the Government servant as the case may be, shall be liable for disciplinary action under the relevant disciplinary rules applicable to such civil servant.

**10. Power to remove difficulties.-** If any difficulty arises in giving effect to the provisions of this Act, the Government may, by order published in the official Gazette make provisions not inconsistent with the provisions of this Act, as it appears to be necessary or expedient for removing the difficulty,

Provided that, no such order shall be made after the expiry of a period of two years from the date of commencement of this Act.

**11. Power to amend the Schedule.-** The Government may, by notification, add or alter any entries specified in the Schedule I and II.

**12. Protection of action taken in good faith.-** No suit, prosecution or other legal proceedings shall lie against any officer of the Government for anything done or intended to be done under this Act in good faith

**13. Power to make rules**: (1) The Government may, by notification and after previous publication, make rules to carry out the purposes of this Act.

(2) Every rule made under this Act shall, immediately after it is made, be laid before the Legislature of the State, if it is in session and if it is not in session, in the session immediately following for a total period of fourteen days which may be comprised in one session or in two successive sessions and if, before the expiration of the session in which it is so laid or the session immediately following the Legislature of the State agrees in making any modification in the rule or in the annulment of the rule, the rule shall, from the date on which the modification or annulment is notified, have effect only in such modified form or shall stand annulled as the case may be, so however, that any such modification or annulment shall be without prejudice to the validity of anything previously done under that rule.

**14. Act to override other laws.-** The provisions of this Act shall have effect notwithstanding anything inconsistent therewith contained in any other law of the State for the time being in force.

## SCHEDULE – I
**[see section 2 (8) and section 11]**
**List of Forest Officers**

| Sl. No | Cadre of posts |
|---|---|
| 1 | Deputy Range Forest Officers |
| 2 | Forest Guards |
| 3 | Forest Watchers |

## SCHEDULE – II
**[see section 2 (13) and section 11]**
**List of Other Officials**

| Sl. No | Cadre of posts |
|---|---|
| 1 | Such category of posts as may be notified by the Government. |

## STATEMENT OF OBJECTS AND REASONS

It is considered necessary to regulate transfer and posting of Deputy Range Forest Officers, Forest Guards and Forest Watchers of Forest Department thereby achieving the following objectives, namely:-

(a) Provide equal opportunity to lower level field staff in selecting place of their choice during transfers; and

(b) Improve administrative efficiency and discipline in the staff.

Hence, the Bill.

## FINANCIAL MEMORANDUM

There is no extra expenditure involved in the proposed legislative measure.

**MEMORANDUM REGARDING DELEGATED LEGISLATION**

| | |
|---|---|
| Clause-2 | Sub-clause (17) of clause 2 empowers the State Government to make rules regarding the minimum period required to work in a place or post. |
| Clause-3 | Sub-clause (1) empowers the State Government to make rules regarding the manner in which the process of counseling to be conducted. |
| Clause-6 | Sub-clause (1) empowers the State Government to make rules regarding the tenure for each category of posts. |
| Clause-13 | Sub-clause (1) empowers the State Government to make rules after previous publication to carry out the purpose of the Act. |

The proposed delegation of Legislative power is normal in character.

**B. RAMANATHA RAI**
Minister For Forest,
Environment and Ecology

**S.Murthy**
Secretary (I/C)
Karnataka Legislative Assembly

Government Press, Suvarna Soudha Unit, Belgavi, 21st November 2016 P7, W.D., Copies 1000